# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್‌ಸಿ ನಂ. 60/2022

ಸಿಡಬ್ಲ್ಯುಃ 1 / ಪಿಡಬ್ಲ್ಯುಃ 1

ದಿನಾಂಕಃ 30.12.2025

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶೈಲಾ ಹೆಬ್ಬಾಳ |
| ಗಂಡನ ಹೆಸರು | : | ಕೊಟ್ರಯ್ಯ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸ ಸ್ಥಳ | : | ಬನ್ನಿಕೊಪ್ಪ ಗ್ರಾಮ, ತಾಃ ಶಿರಹಟ್ಟಿ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ಚಾಸಾ-4 ನನ್ನ ಮಾವ. ಚಾಸಾ-5 ನನ್ನ ಗಂಡ. ಚಾಸಾ-6 ರಿಂದ 8 ರವರು ನನಗೆ ಪರಿಚಯ ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ 1 ರಿಂದ 3 ನೇ ಆರೋಪಿತರನ್ನು ನಾನು ನೋಡಿದ್ದೇನೆ.

2. ನನ್ನ ಗಂಡನ ಮನೆ ಶಿರಹಟ್ಟಿ ತಾಲೂಕಿನ ಬನ್ನಿಕೊಪ್ಪ ಗ್ರಾಮ ಇರುತ್ತದೆ. ಬನ್ನಿಕೊಪ್ಪದ ನಮ್ಮ ಮನೆಯಲ್ಲಿ ನಮ್ಮ ಕುಟುಂಬ ವಾಸವಿರುತ್ತದೆ. ನನ್ನ ಗಂಡ ಶಿಕ್ಷಕರಾಗಿದ್ದರಿಂದ ಈಗ 2024 ರಿಂದ ಬಸವನಬಾಗೇವಾಡಿಯಲ್ಲಿ ವಾಸವಾಗಿದ್ದೇವೆ.

3. ಬನ್ನಿಕೊಪ್ಪ ಗ್ರಾಮದಲ್ಲಿ ನಾಗಭೂಷಣ ಮಠದ ಹತ್ತಿರ ನಮಗೆ ಸೇರಿದ ಸರ್ವೆ ನಂ.175 ರಲ್ಲಿ ಖುಲ್ಲಾ ಜಾಗ ಇರುತ್ತದೆ. ಸದರಿ ಖುಲ್ಲಾ ಜಾಗಕ್ಕೆ ಸಂಬಂಧಿಸಿದಂತೆ ಘಟನೆಗೂ 2 – 3 ವರ್ಷಗಳಿಂದ ಆರೋಪಿತರು ಆಗಾಗ ನಮ್ಮ ಜೊತೆ ಜಗಳಾಡುತ್ತಿದ್ದರು. ಜಗಳ ನಡೆಯುವ ಪೂರ್ವದಲ್ಲಿ ನನ್ನ ಗಂಡ ಶಿರಹಟ್ಟಿ ಪೋಲೀಸ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರನ್ನು ದಾಖಲಿಸಿದ್ದರು.

**(ಈ ಹಂತದಲ್ಲಿ, ಸಾಕ್ಷಿದಾರರು ಸಮಯ ಕೋರಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**